/

**ಕರ್ನಾಟಕ ಸರ್ಕಾರ**

ಸಂಖ್ಯೆ: ಸಿಆಸುಇ 52 ಸೇಇವಿ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನಸೌಧ,
ಬೆಂಗಳೂರು, ದಿನಾಂಕ 25.11.2020

**ಅಧಿಕೃತ ಜ್ಞಾಪನ**

**ವಿಷಯ:** ಸರ್ಕಾರಿ ನೌಕರರ ಅಮಾನತ್ತಿಗೆ ಸಂಬಂಧಿಸಿದಂತೆ ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 10ಕ್ಕೆ ಮಾಡಿರುವ ತಿದ್ದುಪಡಿಗೆ ಸಂಬಂಧಿಸಿದಂತೆ ಸೂಚನೆಗಳು.

**ಉಲ್ಲೇಖ:** ಅಧಿಸೂಚನೆ ಸಂಖ್ಯೆ:ಸಿಆಸುಇ 28 ಸೇಇವಿ 2018, ದಿನಾಂಕ: 29.10.2020.

------

ಶಿಸ್ತು ಕ್ರಮಗಳಿಗೆ ಸಂಬಂಧಿಸಿದಂತೆ, ಸರ್ಕಾರಿ ನೌಕರನನ್ನು ಸೇವೆಯಿಂದ ದೀರ್ಘಾವಧಿಯವರೆಗೆ ಅನಗತ್ಯವಾಗಿ ಅಮಾನತ್ತಿನಲ್ಲಿ ಮುಂದುವರೆಸುವುದರಿಂದ, ಸರ್ಕಾರಕ್ಕೆ ಅನಗತ್ಯ ಆರ್ಥಿಕ ಹೊರೆ ಉಂಟಾಗುವುದಲ್ಲದೇ, ಸರ್ಕಾರಿ ನೌಕರನಿಗೂ ಕೂಡ ಕಿರುಕುಳ ಉಂಟಾಗುತ್ತದೆ. ಅಲ್ಲದೇ, ಇದರಿಂದ ಪ್ರಕರಣವನ್ನು ಇತ್ಯರ್ಥಪಡಿಸುವಲ್ಲಿ ಕೂಡ ವ್ಯತ್ಯಯ ಉಂಟಾಗುತ್ತದೆ. ಇಂತಹ ಪ್ರಸಂಗಗಳನ್ನು ತಪ್ಪಿಸುವ ಉದ್ದೇಶದಿಂದ ಅಧಿಸೂಚನೆ ಸಂಖ್ಯೆ ಸಿಆಸುಇ 28 ಸೇಇವಿ 2018, ದಿನಾಂಕ 29.10.2020ರಲ್ಲಿ, ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 10ಕ್ಕೆ ಕೆಲವು ತಿದ್ದುಪಡಿಗಳನ್ನು ಸರ್ಕಾರವು ಕೈಗೊಂಡಿರುತ್ತದೆ.

2. ಮೇಲಿನ ತಿದ್ದುಪಡಿಯ ಹಿನ್ನೆಲೆಯಲ್ಲಿ, ಸರ್ಕಾರಿ ನೌಕರರ ಅಮಾನತ್ತಿನ ಅವಧಿಯ ಬಗ್ಗೆ ಸರ್ಕಾರವು ಈ ಹಿಂದೆ ಕಾಲಕಾಲಕ್ಕೆ ಹೊರಡಿಸಿರುವ ಎಲ್ಲಾ ಸೂಚನೆಗಳನ್ನು ಮಾರ್ಪಡಿಸಿ, ಈ ಕೆಳಕಂಡ ಮರು ಸೂಚನೆಗಳನ್ನು ನೀಡಲಾಗಿದೆ.

*i.* ಅಮಾನತ್ತುಗೊಂಡ ಆರು ತಿಂಗಳ ಅವಧಿಯೊಳಗೆ ಆಪಾದಿತ ನೌಕರನ ವಿರುದ್ಧ ಇಲಾಖಾ ವಿಚಾರಣೆ ಪ್ರಾರಂಭಿಸದಿದ್ದಲ್ಲಿ ಅಥವಾ ನ್ಯಾಯಾಲಯದಲ್ಲಿ ದೋಷಾರೋಪಣೆ ಪಟ್ಟಿ ಸಲ್ಲಿಸದಿದ್ದಲ್ಲಿ ಅಂತಹ ನೌಕರನ ಅಮಾನತ್ತನ್ನು ರದ್ದುಗೊಳಿಸುವ ಅಥವಾ ಮುಂದುವರೆಸುವ ಬಗ್ಗೆ ಸಕ್ಷಮ ಪ್ರಾಧಿಕಾರವು ವಿಳಂಬವಿಲ್ಲದೇ ತೀರ್ಮಾನಿಸತಕ್ಕದ್ದು ಹಾಗೂ ಈ ಅವಧಿಯೊಳಗೆ ತೀರ್ಮಾನಿಸಿ ಮುಂದುವರೆಸಲು ಆದೇಶಿಸದಿದ್ದಲ್ಲಿ ಅಮಾನತ್ತು ಭಾವಿತ (Deemed) ಆಧಾರದ ಮೇಲೆ ಅಂದರೆ ಅಮಾನತ್ತಿನ ದಿನಾಂಕದಿಂದ ಆರು ತಿಂಗಳು ಪೂರ್ಣಗೊಂಡ ದಿನಾಂಕದಿಂದ ರದ್ದಾಗುವುದು.

*ii.* ಈ ರೀತಿ ಅಮಾನತ್ತು ಆದೇಶವು ರದ್ದುಗೊಂಡ ನಂತರ, ನೇಮಕಾತಿ ಪ್ರಾಧಿಕಾರದಿಂದ ಸ್ಥಳನಿಯುಕ್ತಿ ಆದೇಶವನ್ನು ತಕ್ಷಣವೇ ಕೋರುವುದು ಸರ್ಕಾರಿ ನೌಕರನ ಕರ್ತವ್ಯವಾಗಿರುತ್ತದೆ

ಹಾಗೂ ಅವನು ಆ ರೀತಿ ಕೋರಲು ವಿಫಲನಾದಲ್ಲಿ ಆತನ ಅಮಾನತ್ತಿನ ಆದೇಶವು ರದ್ದಾದ ದಿನಾಂಕದಿಂದ ಆತನು ಅನಧಿಕೃತವಾಗಿ ಗೈರುಹಾಜರಾಗಿರುವನೆಂದು ಭಾವಿಸತಕ್ಕದ್ದು.

iii. ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮ 1988 ಅಥವಾ ಕರ್ನಾಟಕ ಲೋಕಾಯುಕ್ತ ಅಧಿನಿಯಮ 1984ರ ಉಪಬಂಧಗಳಡಿ ಅಮಾನತ್ತಿನಲ್ಲಿಡಲಾದ ಪ್ರಕರಣಗಳಲ್ಲಿ ಸಂಬಂಧಪಟ್ಟ ತನಿಖಾ ಸಂಸ್ಥೆಯ ಸಕ್ಷಮ ಪ್ರಾಧಿಕಾರಿಯು ಮೇಲೆ ತಿಳಿಸಿದಂತೆ 6 ತಿಂಗಳ ಅವಧಿಯೊಳಗೆ ಸರ್ಕಾರಿ ನೌಕರನ ಅಮಾನತ್ತಿನ ಅವಧಿಯನ್ನು, ವಿಸ್ತರಿಸಲು ಕೋರಿಕೆ ಸಲ್ಲಿಸಿದಲ್ಲಿ ಮಾತ್ರ ಅಮಾನತ್ತಿನ ಅವಧಿಯನ್ನು 6 ತಿಂಗಳಿಗೆ ಮೀರಿ ಸಕ್ಷಮ ಪ್ರಾಧಿಕಾರಿಯು ಮುಂದುವರೆಸತಕ್ಕದ್ದು. ಇಲ್ಲದಿದ್ದಲ್ಲಿ, ಅಂತಹ ನೌಕರನ ವಿರುದ್ಧದ ಅಮಾನತ್ತು ಕೂಡ ಆತನನ್ನು ಅಮಾನತ್ತಿನಲ್ಲಿರಿಸಿದ ದಿನಾಂಕದಿಂದ 6 ತಿಂಗಳ ಬಳಿಕ ಸ್ವಯಂಚಾಲಿತವಾಗಿ ರದ್ದಾಗುವುದು.

iv. ಆದರೆ, ಸಂದರ್ಭಾನುಸಾರ 6 ತಿಂಗಳ ಅವಧಿಯೊಳಗೆ ಇಲಾಖಾ ವಿಚಾರಣೆಯನ್ನು ಆರಂಭಿಸಿದ್ದಲ್ಲಿ ಅಥವಾ ದೋಷರೋಪಣಾ ಪಟ್ಟಿಯನ್ನು ಹೊರಡಿಸಿದ್ದಲ್ಲಿ ಮೇಲೆ ತಿಳಿಸಿರುವ 6 ತಿಂಗಳ ಒಳಗಾಗಿಯೇ ಸರ್ಕಾರಿ ನೌಕರನನ್ನು ಸೇವೆಗೆ ಪುನರ್ ಸ್ಥಾಪಿಸಲು ಸಕ್ಷಮ ಪ್ರಾಧಿಕಾರಿಯು ನಿರ್ಧರಿಸಬಹುದಾಗಿದೆ.

v. ಅಮಾನತ್ತುಗೊಂಡ ಸರ್ಕಾರಿ ನೌಕರನನ್ನು ಅಮಾನತ್ತಿನಿಂದ ತೆರವುಗೊಳಿಸಿದಾಗ ಆತನನ್ನು ಯಾವ ಹುದ್ದೆ/ಸ್ಥಾನದಿಂದ ಅಮಾನತ್ತುಗೊಳಿಸಲಾಗಿತ್ತೋ ಅದೇ ಹುದ್ದೆ/ಸ್ಥಾನದಲ್ಲಿ ಪುನರ್ ನೇಮಕ ಮಾಡತಕ್ಕದ್ದಲ್ಲ.

ಸರ್ಕಾರಿ ನೌಕರನ ಅಮಾನತ್ತಿಗೆ ಸಂಬಂಧಿಸಿದಂತೆ, ಮೇಲೆ ನೀಡಲಾದ ಸೂಚನೆಗಳನ್ನು ಎಲ್ಲಾ ಶಿಸ್ತು ಪ್ರಾಧಿಕಾರಗಳು ಹಾಗೂ ಅಮಾನತ್ತಿನಲ್ಲಿಡಲು ಸಕ್ಷಮವಾದ ಪ್ರಾಧಿಕಾರಗಳು ಕಟ್ಟುನಿಟ್ಟಾಗಿ ಅನುಸರಿಸುವಂತೆ ಸೂಚನೆಗಳನ್ನು ನೀಡಲಾಗಿದೆ.

25/11/20

(ಚಂದ್ರಹಾಸ ಗಂ. ತಾಳೂಕರ)
ಸರ್ಕಾರದ ಉಪಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಸೇವಾ ನಿಯಮಗಳು-2)

ಇವರಿಗೆ,

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು

1. ಸರ್ಕಾರದ ಮುಖ್ಯ ಕಾರ್ಯದರ್ಶಿ
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,